# ಸೆಲೆಬ್ರಿಟಿ

■ ಹನಿ

## ಸ್ಪೀಲ್‌ಬರ್ಗ್ ಭೇಟಿ



'ಹಾಲಿವುಡ್ ಮಾಂತ್ರಿಕ' ಸ್ಟೀವನ್ ಸ್ಪೀಲ್‌ಬರ್ಗ್ ಭಾರತಕ್ಕೆ ನೀಡಿದ ಭೇಟಿ, ಮುಖ್ಯವಾಗಿ ಮುಂಬೈ ಚಿತ್ರಜಗತ್ತಿನಲ್ಲಿ ದೊಡ್ಡ ರೋಮಾಂಚನ ಉಂಟು ಮಾಡಿದೆ. ಪತ್ನಿ, ಮಕ್ಕಳ ಜತೆಗೆ ಭಾರತಕ್ಕೆ ಆಗಮಿಸಿರುವ ಸ್ಪೀಲ್‌ಬರ್ಗ್‌ನನ್ನು ಭೇಟಿಯಾಗಲು, ಆತನ ಜತೆ ಊಟ ಮಾಡಲು, ಮಾತನಾಡಲು ಬಾಲಿವುಡ್‌ನ ಸಣ್ಣ ದೊಡ್ಡ ಸ್ಟಾರ್‌ಗಳೆಲ್ಲರೂ ತುದಿಗಾಲಲ್ಲಿ ನಿಂತಿದ್ದರು. ಅಮಿತಾಭ್ ಬಚ್ಚನ್, ಶಾರೂಕ್ ಮುಂತಾದ ಮಹಾತಾರೆಯರೆಲ್ಲ ಈ ಸಂದರ್ಭವನ್ನು ಅತ್ಯುತ್ತಮ ಚರ್ಚೆಗೆ ಬಳಸಿಕೊಂಡ ಸುದ್ದಿ ಬಂದಿದೆ. ಈ ಮಧ್ಯೆ ಸ್ಪೀಲ್‌ಬರ್ಗ್‌ನ ಪತ್ನಿ ಮತ್ತು ಮಕ್ಕಳು ಭಾರತದಲ್ಲಿ ಆಧ್ಯಾತ್ಮಿಕ ಪ್ರವಾಸವನ್ನೂ ನಡೆಸಿದ್ದಾರೆ. ಮುಂಬೈಯಲ್ಲಿ ಖ್ಯಾತ ಉದ್ಯಮಿ ಅನಿಲ್ ಅಂಬಾನಿಯ ಅತಿಥಿಯಾಗಿದ್ದ ಸ್ಪೀಲ್ ಬರ್ಗ್‌ನ ಭೇಟಿ, ಇತರ ಭಾಷೆಗಳ ಚಿತ್ರರಂಗದವರಿಗೆ ಸಾಧ್ಯವಾಗದೇ ಇರುವುದು, ಭಾರತದ ಸಿನಿಮಾ ಉದ್ಯಮ ಕೇವಲ ಮುಂಬೈಯ ಕಪಿಮುಷ್ಟಿ ಯಲ್ಲೇ ಇದೆ ಎನ್ನುವುದಕ್ಕೆ ಸಾಕ್ಷಿ.

30 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಸ್ಪೀಲ್‌ಬರ್ಗ್ ಭಾರತಕ್ಕೆ ಬಂದಿದ್ದಾರೆ. ಈ ಅವಧಿಯಲ್ಲಿ ಬಾಲಿವುಡ್‌ನಲ್ಲಿ ತಾರೆಯರ ಇನ್ನೊಂದು ತಲೆಮಾರೇ ಹುಟ್ಟಿದೆ. ಈ ಹಿಂದೆ 1983ರಲ್ಲಿ 'ಇಂಡಿಯಾನಾ ಜೋನ್ಸ್ ಅಂಡ್ ಟೆಂಪಲ್ ಆಫ್ ಡೂಮ್' ಚಿತ್ರದ ಚಿತ್ರೀಕರಣಕ್ಕೆ ಸ್ಪೀಲ್‌ಬರ್ಗ್ ಬಂದಿದ್ದರು. ಅದಕ್ಕೂ ಮುನ್ನ 1977ರಲ್ಲಿ ಅವರ 'ಕ್ಲೋಸ್ ಎನ್‌ಕೌಂಟರ್ಸ್ ಆಫ್ ಥರ್ಡ್ ಕೈಂಡ್' ಚಿತ್ರದ ಶೂಟಿಂಗ್ ಕೂಡಾ ಭಾರತದಲ್ಲಿ ನಡೆದಿತ್ತು. ಆ ಚಿತ್ರಕ್ಕೆ ಅಂಬಾನಿಯವರ ಉದ್ಯಮ ಗುಂಪೇ ಬಂಡವಾಳ ಹಾಕಿತ್ತು.

ನಿರ್ದೇಶಕ, ನಿರ್ಮಾಪಕ, ಚಿತ್ರಕಥೆಗಾರ, ಸ್ಟುಡಿಯೊ ಮಾಲೀಕ– ಹೀಗೆ ಬಹುಮುಖ ಪ್ರತಿಭೆಯ ಸ್ಪೀಲ್‌ಬರ್ಗ್, ಇದೀಗ ಜುರಾಸಿಕ್ ಪಾರ್ಕ್–4 ರ ಚಿತ್ರೀಕರಣದ ಪೂರ್ವಸಿದ್ಧತೆಯಲ್ಲಿದ್ದಾರೆ. ಶಿಂಡ್ಲರ‍್ಸ್ ಲಿಸ್ಟ್ ಮತ್ತು ಸೇವಿಂಗ್ ಪ್ರೈವೇಟ್ ರ‍್ಯಾನ್ ಎಂಬ ಎರಡು ಚಿತ್ರಗಳ ನಿರ್ದೇಶನಕ್ಕೆ ಎರಡು ಬಾರಿ ಆಸ್ಕರ್ ಗೆದ್ದಿರುವ ಸ್ಪೀಲ್‌ಬರ್ಗ್ ತನ್ನ ಕಥೆ ಮತ್ತು ನಿರೂಪಣೆಯ ಹೊಸತನ ಮತ್ತು ವೈಭವಕ್ಕೆ ಹೆಸರಾದವರು. ಅವರ 'ಜಾಸ್', ಇಟಿ, ಜುರಾಸಿಕ್ ಪಾರ್ಕ್ ಮುಂತಾದ ಚಿತ್ರಗಳ ಬಾಕ್ಸಾಫೀಸ್ ಗಳಿಕೆಯ ದಾಖಲೆಯನ್ನು ಸರಿಗಟ್ಟಲು ಇನ್ನೂ ಯಾರಿಗೂ ಆಗಿಲ್ಲ. ಈಗ 'ಜುರಾಸಿಕ್ ಪಾರ್ಕ್–4' ಇನ್ನಷ್ಟು ಕುತೂಹಲ ಕೆರಳಿಸಿದೆ. ಸ್ಪೀಲ್‌ಬರ್ಗ್ ಅವರ ಭಾರತ ಭೇಟಿಯ 'ವೃತ್ತಿಪರ ಲಾಭ' ಪಡೆಯಲು ಬಾಲಿವುಡ್ ಯಶಸ್ವಿಯಾದರೆ ನಮ್ಮ ಸಿನಿಮಾ ಉದ್ಯಮವೂ ಜಾಗತಿಕ ವ್ಯಾಪ್ತಿಗೆ ಹಿಗ್ಗಬಹುದು. ಆದರೆ ಅಂತಹ ಪ್ರಯತ್ನ ನಡೆದಂತೆ ಕಾಣುತ್ತಿಲ್ಲ. ●

## ವಿಜೇಂದರ್ ವಿವಾದ

2008ರ ಒಲಿಂಪಿಕ್‌ನಲ್ಲಿ ಮಿಡ್ಲ್‌ವೈಟ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದು ಇಡೀ ಭಾರತಕ್ಕೇ ಹೆಮ್ಮೆ ಮೂಡಿಸಿದ್ದ ವಿಜೇಂದರ್ ಸಿಂಗ್ ಬೇನಿವಾಲ್ ಈಗ ಮಾದಕ ದ್ರವ್ಯ ಕಳ್ಳಸಾಗಣೆಯ ಆರೋಪ ಎದುರಿಸುತ್ತಿರುವುದು ಕ್ರೀಡಾ ಅಭಿಮಾನಿಗಳಲ್ಲಿ ಆತಂಕ ಹುಟ್ಟಿಸಿದ ಸಂಗತಿ. ಇದನ್ನು ಬರೆಯುವ ಹೊತ್ತಿಗೆ ಆರೋಪ ಸಾಬೀತಾಗುವ ಅಥವಾ ಬಂಧನಕ್ಕೆ ಒಳಗಾಗುವ ಪ್ರಕ್ರಿಯೆ ನಡೆದಿಲ್ಲ ವಾದರೂ, ಪೊಲೀಸರು ಹೇಳುವುದನ್ನು ಕೇಳಿದರೆ ಇಂದಲ್ಲ ನಾಳೆ ವಿಜೇಂದರ್ ಜೈಲು ಕಂಬಿ ಎಣಿಸುವಂತೆ ಕಾಣುತ್ತಿದೆ. ವಿಜೇಂದರ್ ಗೆಳೆಯ, ಪಾಲುದಾರ ಎಲ್ಲವೂ ಆಗಿರುವ ರಾಮ್ ಸಿಂಗ್‌ನನ್ನು ಈಗಾಗಲೆ ಬಂಧಿಸಿದ್ದು ಆತ ನೀಡಿರುವ ಸಾಕ್ಷ್ಯ ವಿಜೇಂದರ್ ಕೊರಳಿಗೆ ಉರುಳಾಗುವಂತಿದೆ.

ಅನೂಪ್ ಸಿಂಗ್ ಕಹ್ಲಾನ್ ಎಂಬಾತನ ಫ್ಲ್ಯಾಟ್‌ನಿಂದ ಪೊಲೀಸರು 130 ಕೋಟಿ ರೂಪಾಯಿ ಮೌಲ್ಯದ 26 ಕೆ.ಜಿ ಹೆರಾಯಿನ್ ವಶಪಡಿಸಿಕೊಂಡಿದ್ದಾರೆ. ಅಲ್ಲಿಗೆ ರಾಮ್ ಸಿಂಗ್ ಭೇಟಿ ನೀಡಿರುವುದು ಖಚಿತವಾಗಿದೆ. ಹಾಗೆ ಭೇಟಿ ನೀಡಿದಾಗ ಬಳಸಿದ್ದು ವಿಜೇಂದರ್ ಕಾರು. ಇಷ್ಟು ಮಾತ್ರ ವಿಷಯವಾಗಿದ್ದರೆ ವಿಜೇಂದರ್, ಸಿಕ್ಕಿ ಬೀಳಲಿಕ್ಕಿಲ್ಲ. ಆದರೆ ವಿಜೇಂದರ್ ಮತ್ತು ಅನೂಪ್ ಸಿಂಗ್ ನಡುವಣ ಮೊಬೈಲ್ ಮಾತುಕತೆಯ ವಿವರಗಳೆಲ್ಲವೂ ತಮ್ಮ ಬಳಿ ಇವೆ ಎಂದು ಪೊಲೀಸರು ಹೇಳಿರುವುದು ಪರಿಸ್ಥಿತಿ ತೀರಾ ಕ್ಲಿಷ್ಟ ಎನ್ನುವುದನ್ನು ಸೂಚಿಸುತ್ತದೆ.

ಹರ‍್ಯಾಣದ ಪೊಲೀಸ್ ಇಲಾಖೆಯಲ್ಲಿ ಡಿಎಸ್‌ಪಿ ಆಗಿರುವ ವಿಜೇಂದರ್, ಈ ಹಗರಣದಲ್ಲಿ ಸಿಕ್ಕಿ ಬಿದ್ದರೆ ಭಾರತದ ಬಾಕ್ಸಿಂಗ್ ಕ್ಷೇತ್ರಕ್ಕೂ ಇದೊಂದು ದೊಡ್ಡ ಹೊಡೆತವಾಗಲಿದೆ. ಈ ವಿವಾದ ವಿಜೇಂದರ್ ಅವರ ಕೋಟ್ಯಂತರ ರೂಪಾಯಿ ಮೌಲ್ಯದ ಜಾಹೀರಾತು ಇಮೇಜ್‌ಗೂ ಧಕ್ಕೆ ಉಂಟು ಮಾಡಿದೆ. ಸದ್ಯಕ್ಕೆ ವೆಂಕೋಬ್ ಚಿಕನ್ ಮತ್ತು ಸಹಾರಾ ಉದ್ಯಮ ಗುಂಪಿನ ಎರಡು ಜಾಹೀರಾತುಗಳನ್ನು ಬಿಟ್ಟರೆ ಉಳಿದ ಜಾಹೀರಾತುಗಳಿಂದ ವಿಜೇಂದರ್ ಹೊರ ಬೀಳುವ ಸಾಧ್ಯತೆ ಇದೆ. 'ಕಳೆದ ಐದು ವರ್ಷಗಳಲ್ಲಿ ವಿಜೇಂದರ್ ಅವರನ್ನು ನಾಡಾ ಅಧಿಕಾರಿಗಳು ಹಲವು ಸಲ ಮಾದಕ ಸೇವನೆ ತಪಾಸಣೆಗೆ ಒಳ ಪಡಿಸಿದ್ದಾರೆ. ಆಗೆಲ್ಲಾ ಅವರು ಮಾದಕ ದ್ರವ್ಯ ಸೇವಿಸಿದ್ದು ಗೊತ್ತಾಗಿಲ್ಲ. ಈಗ ಇದರಲ್ಲೇನೋ ಸಂಚು ಇದ್ದಂತಿದೆ' ಎಂಬ ಗೆಳೆಯರ ಆಶಾವಾದಕ್ಕೆ ಗೆಲುವು ಸಿಗಬಹುದೆ? ●





Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008,

©All rights reserved. Reproduction in whole or in part without permission is prohibited.
RNI No 7891/65